## ಐಮ್ಯಾಕ್ ಜಿ4 (2001)



ಅತ್ಯಾಕರ್ಷಕ ಗಣಕಯಂತ್ರ ಎನಿಸಿದ್ದು ಐಮ್ಯಾಕ್ ಜಿ4 ಕಂಪ್ಯೂಟರ್. ಗುಮ್ಮಟ ಆಕಾರದ ಸ್ಟ್ಯಾಂಡ್. ಅದರ ಮೇಲೊಂದು ಸ್ಟೀಲ್, ಅದರ ಕೊನೆಗೆ ಅಳವಡಿಸಿದ ಮಾನಿಟರ್‌ನ ವಿನ್ಯಾಸವು ನೋಡಲು ಚೆಂದವಾಗಿದೆ. ಬಿಳಿ ಹಾಗೂ ಸಿಲ್ವರ್ ಬಣ್ಣದ ಕಾಂಬಿನೇಷನ್‌ನಲ್ಲಿ ರೂಪುಗೊಂಡ ಇದು ಆಕರ್ಷಕವಾಗಿದೆ. ಜಾನಿಗೆ ಹೆಚ್ಚು ಕೀರ್ತಿ ತಂದುಕೊಟ್ಟ ವಿನ್ಯಾಸವಿದು. ಇದರ ಮಾನಿಟರ್ ಅನ್ನು ಸುಲಭವಾಗಿ ಅತ್ತಿಂದಿತ್ತ ತಿರುಗಿಸಬಹುದಾಗಿತ್ತು. ಈ ಪ್ರಾಡಕ್ಟ್ ಟೈಮ್ ಮ್ಯಾಗಜೀನ್‌ನ ಮುಖಪುಟ ಅಲಂಕರಿಸಿತ್ತು.

## ಐಮ್ಯಾಕ್ ಜಿ5 (2004)



ಎಲ್ (L) ಆಕಾರದ ಗಟ್ಟಿಮುಟ್ಟಾದ ಸ್ಟ್ಯಾಂಡ್, ದೊಡ್ಡ ಪರದೆ ಐಮ್ಯಾಕ್ ಜಿ5ನಲ್ಲಿ ಎದ್ದು ಕಾಣುವ ವಿನ್ಯಾಸ. ಆ್ಯಪಲ್ ಕಂಪನಿಯ 'ಆಲ್ ಇನ್ ಒನ್' ಸೌಲಭ್ಯ ಇದರಲ್ಲಿತ್ತು. ಇದು ಐಮ್ಯಾಕ್ ಸರಣಿಯ ಎಲ್ಲ ಪ್ರಾಡಕ್ಟ್‌ಗಳಿಗೆ ಮಾದರಿ ಟೆಂಪ್ಲೇಟ್ ಆಗಿದ್ದು ಗ್ರಾಹಕರಿಗೆ ಇದರ ವಿನ್ಯಾಸ ಎಷ್ಟರಮಟ್ಟಿಗೆ ಇಷ್ಟವಾಗಿತ್ತು ಎಂಬುದಕ್ಕೆ ಹಿಡಿದ ಕನ್ನಡಿ. ಮಾರುಕಟ್ಟೆಗೆ ಬಂದು ಸುಮಾರು 15 ವರ್ಷಗಳಾದರೂ ಇದರ ಚಹರೆಯನ್ನು 'ಆ್ಯಪಲ್'ನ ವಿವಿಧ ಪ್ರಾಡಕ್ಟ್‌ಗಳಲ್ಲಿ ಈಗಲೂ ಕಾಣಬಹುದಾಗಿದೆ.

## ಐಫೋನ್ (2007)

(2007–2018ರ ಐಫೋನ್ ಎಕ್ಸ್‌ಎಸ್‌ವರೆಗೆ)



ಐಫೋನ್ ವಿನ್ಯಾಸ ಬೀರಿದಷ್ಟು ಪರಿಣಾಮ ಬೇರೆ ಯಾವುದೇ ಟೆಕ್ ಡಿವೈಸ್‌ಗಳು ಬೀರಿಲ್ಲ. ಜಾನಿ ರೂಪಿಸಿದ ಈ ಫೋನ್‌ಗಳ ವಿನ್ಯಾಸವು ಗ್ರಾಹಕರ ಮನದಲ್ಲಿ ನೆಲೆಯೂರಿತ್ತು. 'ಆ್ಯಪಲ್'ನ ಪ್ರತಿ ಹೊಸ ಮೊಬೈಲ್ ವಿಶೇಷ ಫೀಚರ್ ಹೊಂದಿದ್ದವು. ಇದೇ ಕಾರಣಕ್ಕೆ ಗ್ರಾಹಕರು ಈ ಮೊಬೈಲ್‌ಗಳತ್ತ ಮುಖಮಾಡಿದ್ದು. ತರಹೇವಾರಿ ಬಣ್ಣಗಳಲ್ಲಿ ರಚಿತಗೊಂಡಿದ್ದ ಈ ಐಫೋನ್‌ಗಳು ಈಗಲೂ ಗ್ರಾಹಕರ ನೆಚ್ಚಿನ ಮೊಬೈಲ್‌ಗಳು ಆಗಿವೆ.

## ಐಪ್ಯಾಡ್ (2010)



ಟ್ಯಾಬ್ಲೆಟ್ಸ್ ಡಿವೈಸ್‌ಗಳಲ್ಲಿ ಅತಿ ಸದ್ದು ಮಾಡಿದ್ದು ಐಪ್ಯಾಡ್. ಆಕಾರದಲ್ಲಿ ಐಫೋನ್‌ಗಳಿಗಿಂತ ದೊಡ್ಡದಾಗಿತ್ತು. ದೊಡ್ಡ ಡಿಸ್‌ಪ್ಲೇಯ (ಪರದೆ) ಇದು ಟ್ಯಾಬ್ಲೆಟ್ ಡಿವೈಸ್‌ಗಳ ಹೊಸಯುಗ ಪ್ರಾರಂಭಕ್ಕೆ ಮುನ್ನುಡಿ ಬರೆಯಿತು. 9.7 ಇಂಚಿನ ಡಿಸ್‌ಪ್ಲೇ, ಹೋಮ್ ಬಟನ್ ಆಕರ್ಷಕವಾಗಿತ್ತು. ಯಾವುದೇ ರಾಜಿಯಾಗದೆ ಅಳೆದು ತೂಗಿ ಜಾನಿ, ವಿನ್ಯಾಸಗೊಳಿಸಿದ ಈ ಐಪ್ಯಾಡ್ ನಯವಾದ ಹಾಗೂ ಶಕ್ತಿಯುತ ಟ್ಯಾಬ್ಲೆಟ್ ಎಂಬ ಅನುಭವ ನೀಡುತ್ತದೆ. ಸದ್ಯ ಇದು ಬೇರೆ ಬೇರೆ ವಿಧಗಳಲ್ಲಿ, ಗಾತ್ರದಲ್ಲಿ ಲಭ್ಯ.

## ಐಒಎಸ್ 7 (2013)



2013ರಲ್ಲಿ ಜಾನಿ ಈವ್, ಹಾರ್ಡ್‌ವೇರ್ ಜೊತೆಗೆ ಐಒಎಸ್ (ಐಫೋನ್ ಆಪರೇಟಿಂಗ್ ಸಿಸ್ಟಂ)ನ ವಿನ್ಯಾಸದಲ್ಲೂ ತೊಡಗಿಸಿಕೊಂಡು ರೂಪಿಸಿದ್ದು ಐಒಎಸ್ 7. ಇದನ್ನು ಆ್ಯಂಡ್ರಾಯ್ಡ್ ಆಪರೇಟಿಂಗ್ ಸಿಸ್ಟಂಗೆ ಪ್ರತಿಯಾಗಿ ರಚಿಸಲಾಗಿತ್ತು. ಐಒಎಸ್‌ನ ಸಂಪೂರ್ಣ ವಿನ್ಯಾಸವು ಜಾನಿಯ ಉಸ್ತುವಾರಿಯಲ್ಲಿ ರೂಪುಗೊಂಡಿತ್ತು. ಅದರ ಪ್ರತಿಫಲವಾಗಿ ಪ್ರಕಾಶಮಾನದ ನೀಲಿಬಣ್ಣಗಳು, ಅರೆಪಾರದರ್ಶಕ ನೋಟಿಫಿಕೇಷನ್ ಶೇಡ್‌ಗಳು, ಹೋಮ್ ಸ್ಕ್ರೀನ್ ವಿನ್ಯಾಸ ಐಫೋನ್‌ಗಳಿಗೆ ಮರುಜೀವ ನೀಡಿತು.

## ಆ್ಯಪಲ್ ವಾಚ್ (2014)



ಕೈಗೆ ಕಟ್ಟುವ ಈ ವಾಚ್‌ಗಳು ಉಳಿದೆಲ್ಲ ವಾಚ್‌ಗಳಿಗಿಂತ ವಿಭಿನ್ನ. 'ಆ್ಯಪಲ್'ನ ಮೊದಲ ಫಿಟ್‌ನೆಸ್ ಟ್ರ್ಯಾಕರ್ ಉತ್ಪನ್ನವಿದು. ಸ್ಟೇನ್‌ಲೆಸ್ ಸ್ಟೀಲ್ ಬಾಡಿ, ಆಯತಾಕಾರದ ಡಿಸ್‌ಪ್ಲೇ, ಡಿಜಿಟಲ್ ಕ್ರೌನ್, ಸುಲಭವಾಗಿ ಬದಲಿಸಬಲ್ಲ ಬ್ಯಾಂಡ್‌ಗಳನ್ನು ಒಳಗೊಂಡ ಈ ವಾಚ್‌ನ ಅಪ್‌ಡೇಟೆಡ್ ವರ್ಷನ್ 2018ರಲ್ಲಿ ಬಂತು. 'ಸಾಧನವು ತುಂಬಾ ಶಕ್ತಿಯುತ, ವೈಯಕ್ತಿಕ, ವಿವೇಚನೆಯುಳ್ಳ, ನಿತ್ಯದ ಬದುಕಿನ ವಿಧಾನ ಬದಲಿಸಬಲ್ಲ ವಾಚ್ ಇದು' ಎಂದು ಈವ್ ಹೇಳಿದ್ದರು.